ಮೂಲ ದಾವಾ ನಂಃ 92/2014

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **19-11-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ. ವಕೀಲರಿಂದಃ**

ನಾವು 3 ಗುಂಟೆ ಜಾಗವನ್ನು ಖರೀದಿ ಮಾಡುವ ಪೂರ್ವದಲ್ಲಿ ಬಾಲಚಂದ್ರ ಮಾದೇವ ನಾಯ್ಕು ಇವರನ್ನು ಗಡಿ ಗುರುತುಗಳನ್ನು ನಿಖರವಾಗಿ ಗುರುತಿಸಿಕೊಡುವಂತೆ ಕೇಳಿದ್ದೆವು. ಆದರೆ, ಅವರು ಅಂದಾಜು ರೀತಿಯಲ್ಲಿ ಗುರುತಿಸಿಕೊಟ್ಟಿದ್ದಾರೆ ಎಂಬುದಾಗಿ ನುಡಿದಿದ್ದಾರೆ. ನಾನು ನಿಖರವಾಗಿ ಗಡಿ ಗುರುತುಗಳನ್ನು ತೋರಿಸಿಕೊಟ್ಟರೆ ಮಾತ್ರ ಸ್ಥಳವನ್ನು ಖರೀದಿಸುವುದಾಗಿ ಬಾಲಚಂದ್ರ ನಾಯ್ಕರವರಿಗೆ ಹೇಳಿದ್ದೆನು. ಆ ಸಮಯದಲ್ಲಿ ಅವರು ವೈವಾಟಿ ಗಡಿಯನ್ನು ತೋರಿಸಿಕೊಟ್ಟಿದ್ದಾಗಿ ನುಡಿದಿದ್ದಾರೆ.

ನಾನು 3 ಗುಂಟೆ ಜಾಗವನ್ನು ಖರೀದಿ ಮಾಡಿದ ನಂತರ ಸಹ, ಸದರಿ ಮೂರು ಗುಂಟೆ ಸ್ಥಳದ ಗಡಿ ಗುರುತುಗಳನ್ನು ಸ್ಪಷ್ಟವಾಗಿ ಗುರುತಿಸಿಕೊಡುವಂತೆ ಅವರನ್ನು ಕೇಳಿದಾಗ ಅವರು ಗುರುತಿಸಿಕೊಟ್ಟಿದ್ದಾರೆ. ನಾನು ಖರೀದಿ ಮಾಡಿದ ಎರಡರಿಂದ ಎರಡೂವರೆ ತಿಂಗಳ ನಂತರದಲ್ಲಿ ಅವರು ಸರ್ವೆಯನ್ನು ಮಾಡಿಸಿ, ಗಡಿ ಗುರುತುಗಳನ್ನು ಗುರುತಿಸಿಕೊಟ್ಟಿದ್ದಾರೆ. ಸರ್ವೆ ಮಾಡುವ ಕಾಲಕ್ಕೆ ನಕಾಶೆಯನ್ನು ತಯಾರಿಸಿದ್ದು ಅದು ನನ್ನ ತಾಬಾ ಇದೆ. ಸದ್ರಿ ನಕಾಶೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಮೂರು ಗುಂಟೆ ಸ್ಥಳವನ್ನು ಖರೀದಿ ಮಾಡುವ ಕಾಲಕ್ಕೆ ಕ್ರಮ ದಸ್ತಾವೇಜಿನ ಜೊತೆಗೆ ಇಟ್ಟಂತಹ ನಕಾಶೆಯು ಸರಿಯಾಗಿ ಇರುತ್ತದೆ.

ಪ್ರಸ್ತುತ ದಾವೆಯಲ್ಲಿ ಮಾನ್ಯ ನ್ಯಾಯಾಲಯದಿಂದ ದಾವಾ ಸ್ಥಳಕ್ಕೆ ನಿಯೋಗಿಯವರು ನೇಮಕವಾಗಿ ಬಂದಿದ್ದರು ಎಂದರೆ ಸರಿ. ಸದ್ರಿ ನಿಯೋಗಿಯವರು ಸರ್ವೆ ಮಾಡುವ ಕಾಲಕ್ಕೆ ನಾನು ಮತ್ತು ವಾದಿ ಇಬ್ಬರೂ ಹಾಜರಿದ್ದೆವು ಎಂದರೆ ಸರಿ. ಸದ್ರಿ ನಿಯೋಗಿಯವರು ನನ್ನ ಮತ್ತು ವಾದಿಯ ಸಮಕ್ಷಮದಲ್ಲಿಯೇ ಸರ್ವೆ ಕಾರ್ಯವನ್ನು ಕೈಗೊಂಡಿದ್ದಾರೆ ಎಂದರೆ ಸರಿ.ನಿಯೋಗಿಯವರ ವರದಿಯನ್ನು ನಾನು ನೋಡಿದ್ದೇನೆ. ಆ ಸಮಯದಲ್ಲಿ ನಿಯೋಗಿಯವರು ಗುಡ್ಡ ಇದೆ , ಆದ್ದರಿಂದ ನೀವು ಇನ್ನೊಮ್ಮೆ ಸರ್ವೆಯನ್ನು ಮಾಡಿಸುವುದು ಒಳ್ಳೆಯದು ಎಂದು ನುಡಿದಿದ್ದರು. ನಿಯೋಗಿಯವರು ಮಾನ್ಯ ನ್ಯಾಯಾಲಯುದ ಮುಂದೆ ಹಾಜರುಪಡಿಸಿರುವ ವರದಿ ಹಾಗೂ ನಕಾಶೆಯನ್ನು ನಾನು ನೋಡಿದ್ದು ಇರುವುದಿಲ್ಲ. ಸದ್ರಿ ವರದಿಯಲ್ಲಿ ಗುಡ್ಡ ಇದೆ, ಆದ್ದರಿಂದ ಇನ್ನೊ ಮ್ಮೆ ಸರ್ವೆ ಮಾಡಿಸಬೇಕೆಂಬ ಅಂಶವನ್ನು ನಮೂದಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ನಿಯೋಗಿಯವರು ಮಾಡಿದಂತಹ ಸರ್ವೆಯ ವರದಿಯನ್ನು ನಾನು ನೋಡದೇ ಇರುವುದರಿಂದ ಸದ್ರಿ ವರದಿಯು ಸರಿ ಅಥವಾ ತಪ್ಪು ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದ್ರಿ ನಿಯೋಗಿಯವರ ವರದಿಗೆ ನನ್ನ ತಂದೆಯವರು ತಕರಾರನ್ನು ಸಲಿಸ್ಲಿಸಿದ್ದಾರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ದಾವೆಯಲ್ಲಿ ಪಕ್ಷಗಾರನಾಗಿ ಸೇರಿಕೊಂಡ ನಂತರ ಸದ್ರಿ ನಿಯೋಗಿಯವರ ವರದಿಗೆ ನನ್ನ ತಂದೆಯವರು ಆಕ್ಷೇಪಣೆ ಸಲ್ಲಿಸಿದ್ದಾರೋ ಇಲ್ಲವೋ ಎಂಬುದನ್ನು ನಾನು ನೋಡಿದ್ದು ಇರುವುದಿಲ್ಲ.

ನಾನು ನಿಯೋಗಿಯವರು ಹೇಳಿದಂತೆ ಇನ್ನೊಮ್ಮೆ ಸರ್ವೆಯನ್ನು ಮಾಡಿಸಬೇಕೆಂದು ನ್ಯಾಯಾಲಯದ ಮುಂದೆ ಮತ್ತೊಮ್ಮೆ ಸರ್ವೆಯರ್ ರವರನ್ನು ನೇಮಕ ಮಾಡಲು ಮಾನ್ಯ ನ್ಯಾಯಾಲಯದ ಮುಂದೆ ಯಾವುದೇ ಕ್ರಮ ತೆಗೆದುಕೊಂಡಿದ್ದು ಇರುವುದಿಲ್ಲ. ನಿಯೋಗಿಯವರು ಸಲ್ಲಿಸಿದ ವರದಿಯು ಸರಿಯಾಗಿರುವುದರಿಂದ ನಾನು ಇಲ್ಲಿಯವರೆಗೂ ಬೇರೆ ಸರ್ವೆಯನ್ನು ಮಾಡಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸೆಟ್‌ಬ್ಯಾಕ್‌ನ್ನು ಬಿಡದೇ ಸದ್ರಿ ಸ್ಥಳದಲ್ಲಿ ವಾದಿಯ ಸ್ಥಳವನ್ನು ಅತಿಕ್ರಮಿಸಿ ಕಟ್ಟಡವನ್ನು ಕಟ್ಟಿದ್ದೇನೆ, ಹಾಗೂ ಸದ್ರಿ ವಿಷಯವನ್ನು ನಿಯೋಗಿಯವರ ವರದಿಯಲ್ಲಿ ನಮೂದಿಸಿದ್ದಾರೆ ಎಂದರೆ ಸರಿಯಲ್ಲ.

ನಾನು ವಾದಿಯ ಉತ್ತರಕ್ಕೆ ಇರುವ ಶಿಲೆ ಕಂಬಗಳನ್ನು ಕಿತ್ತು ಹಾಕಿ ಸದ್ರಿ ಸ್ಥಳವನ್ನು ಅತಿಕ್ರಮಿಸಿ ಮೊದಲ ಮಹಡಿ ಸಂಡಾಸ್ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ವಾದಿಯ ಸ್ಥಳವನ್ನು ಒತ್ತುವರಿ ಮಾಡಿ ನನ್ನ ಕಟ್ಟಡವನ್ನು ವಿಸ್ತರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ಜಾಗವನ್ನು ಅತಿಕ್ರಮಿಸಿ ಕಟ್ಟಡವನ್ನು ಕಟ್ಟುತ್ತಿರುವ ಕುರಿತಾಗಿ ವಾದಿಯು ಕರ್ಕಿ ಗ್ರಾಮ ಪಂಚಾಯತಿಗೆ ದೂರನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ, ಹಾಗೂ ಗ್ರಾಮ ಪಂಚಾಯತಿಯವರು ನನ್ನನ್ನು ಕರೆಸಿ ವಿಚಾರಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಮನೆಯ ಕಟ್ಟಡದ ಸಜ್ಜಾ ಸಹ ವಾದಿಯ ಸ್ಥಳವನ್ನು ಅತಿಕ್ರಮಿಸಿ ಕಟ್ಟಲಾಗಿದೆ ಎಂದರೆ ಸರಿಯಲ್ಲ.

ನಾನು ವಾದಿಯ ಸ್ಥಳವನ್ನು ಅತಿಕ್ರಮಸಿ ಅನದೀಕೃತವಾಗಿ ಕಟ್ಟಡವನ್ನು ಕಟ್ಟಿದ್ದನ್ನು ಖಾಲಿ ಮಾಡಿಕೊಡಬೇಕೆಂದಾಗ ಸಾಕ್ಷಿ ನಾನು ಅತಿಕ್ರಮಣ ಮಾಡಿಲ್ಲ ಎಂಬುದಾಗಿ ನುಡಿದಿದ್ದಾರೆ. ನಾನು ಕಟ್ಟಡವನ್ನು ಕಟ್ಟುವ ಪೂರ್ವದಲ್ಲಿ ಪಂಚಾಯತಿಯಿಂದ ಯಾವುದೇ ಅನುಮತಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ ತದನಂತರ , ನಾನು ಪಂಚಾಯತಿಯವರ ಮೇಲೆ ಪ್ರಭಾವ ಬೀರಿ ಪರವಾನಿಗೆಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಅತಿಕ್ರಮಿಸಿದ ಜಾಗದ ಕಬ್ಜಾವನ್ನು ಪಡೆಯಲು ವಾದಿಯು ಅರ್ಹರೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.